# ಶಾಸ್ತ್ರಿಗಳ ಸಮ್ಮುಖದಲ್ಲಿ ಜೀವನ-ಪ್ರಕೃತಿ ಪಾಠ

ಸಂಜಯ್ ‘ಶೆಟ್ರೇ, ಇಲ್ಲಿ ಕಾಟೇಜ್ ಮಾಡುವ ಕೆಲಸ ನಿಮ್ಮದು. ಅದಕ್ಕೆ ಬೇಕಾದ ಹಣ ನಾನೇ ಕೊಡ್ತೇನೆ. ಇನ್ನು ಎರಡು ವಾರದೊಳಗೆ ಒಂದು ಸಣ್ಣ ಆಶ್ರಮದ ಹಾಗೆ ಕಾಣುವ ಕಾಟೇಜ್ ನಿಮಗೆ ಮಾಡ್ಲಿಕ್ಕೆ ಆಗ್ಬಹುದಾ?’ ಕೇಳಿದ.

ಶೆಟ್ರಿಗೆ ಸ್ವಲ್ಪ ಮುಜುಗರ ಆಯ್ತು. ‘ಅಲ್ಲ ಕಾರಂತರೇ, ದುಡ್ಡಿಗಾಗಿ ನಾನು ಹೇಳ್ಲಿಲ್ಲ...’ ಎನ್ನುತ್ತಾ ಶುರು ಮಾಡಿದರು.

ಸಂಜಯ್ ಶೆಟ್ಟರನ್ನು ಅಲ್ಲೇ ನಿಲ್ಲಿಸಿ, ‘ಶೆಟ್ರೇ, ನೀವೇನೂ ಮುಜುಗರ ಪಡ್ಕೊಳ್ಳಬೇಡಿ. ನಾನು ನಿಮ್ಮ ಮನೆ ಹುಡುಗನ ಹಾಗೆ ಎಂದುಕೊಳ್ಳಿ. ನೋಡಿ, ದುಡ್ಡನ್ನು ನಾನು ನನ್ನ ಕಿಸೆಯಿಂದ ಕೊಡ್ತಾ ಇಲ್ಲ. ಈ ಸೀತಾಪುರದ ಪ್ರೋಗ್ರಾಮ್‌ಗೆ ನನಗೆ ಸ್ಪಾನ್ಸರ್ಸ್ ಇದ್ದಾರೆ ಅಂತ ಹೇಳಿದೆ ಅಲ್ವ? ಆ ಹಣದಲ್ಲಿ ಈ ಊರಿನ ಅಭಿವೃದ್ದಿಗಾಗಿ ಹಣವೂ ಇದೆ. ಆದರೆ ಒಂದೇ ಕಂಡೀಷನ್: ನಾನು ಇನ್ನೆರಡು ತಿಂಗಳಲ್ಲಿ ಈ ಊರನ್ನು ಮಾರ್ಪಾಡು ಮಾಡಿ ತೋರಿಸ್ಬೇಕು, ಅಷ್ಟೇ. ಇದು ಅವರ ‘ಸೀಡ್ ಫಂಡ್’. ಇದನ್ನು ನಾನು ಹೇಗೆ ಬೇಕಾದರೂ ಉಪಯೋಗಿಸಬಹುದು. ಅದು ನನಗೆ ಬಿಟ್ಟದ್ದು... ಅವರಿಗೆ ನಾನು ಇಲ್ಲಿ ಮಾಡಿದ ಅಭಿವೃದ್ಧಿಯನ್ನು ಆಗಾಗ ತೋರಿಸಬೇಕು, ಅಷ್ಟೇ’ ಅಂದ.

ಶೆಟ್ಟರಿಗೆ ಅವರ ಕಿವಿಯನ್ನು ನಂಬಲಿಕ್ಕೇ ಆಗಲಿಲ್ಲ. ‘ಕಾರಂತರೇ, ಎಲ್ಲಾ ನಿಮ್ಮ ಕೃಪೆ... ಆದರೂ ಒಂದು ಪ್ರಶ್ನೆ. ಆ ಕಂಪೆನಿಯವರಿಗೆ ಇದರಿಂದ ಏನು ಲಾಭ ಇದೆ? ನಾವು ಗಳಿಸಿದ ಹಣದಲ್ಲಿ ಅವರಿಗೂ ಕೊಡಬೇಕಾ?’ ಕೇಳಿದರು.

‘ಇಲ್ಲ ಶೆಟ್ರೇ, ನಿಮಗೆ ಇದನ್ನು ವಿವರಿಸುವುದು ಸ್ವಲ್ಪ ಕಷ್ಟ. ಟೀವಿಯಲ್ಲಿ ಬಿಗ್ ಬಾಸ್ ಅಂತ ಒಂದು ರಿಯಾಲಿಟಿ ಶೋ ಆಗಿತ್ತು ನೋಡಿ. ಹಾಗೇ ಇದೊಂದು ರಿಯಾಲಿಟಿ ಶೋ. ಇದರಲ್ಲಿ ನಾನು ಹೇಗೆ ಒಂದು ಹಳ್ಳಿಯನ್ನು ಎರಡು ತಿಂಗಳಲ್ಲಿ ಅಭಿವೃದ್ಧಿ ಮಾಡ್ಬಹುದು ಅಂತ ತೋರಿಸ್ತೇನೆ. ಟೀವಿಯ ಬದಲಿಗೆ ಇದು ಸೋಶಿಯಲ್ ಮೀಡಿಯಾದಲ್ಲಿ ನಡೆಯುತ್ತದೆ. ಇದನ್ನು ನೋಡುವವರು ಸೋಶಿಯಲ್ ಮೀಡಿಯಾದಲ್ಲಿ ಲಕ್ಷಾಂತರ ಜನ ಇರ್ತಾರೆ. ಆಗ ಈ ಕಂಪನಿ ಜಾಹೀರಾತು ಹಾಕಿ ದುಡ್ಡು ಮಾಡುತ್ತದೆ. ಅವರು ಬಂಡವಾಳ ಹಾಕಿದ್ದಕ್ಕಿಂತ ನಾಲ್ಕೈದು ಪಟ್ಟು ಹೆಚ್ಚು ಲಾಭ ಅವರಿಗೆ ಆಗುತ್ತದೆ. ಹಾಗಾಗಿ ನಾವು ಯಾರಿಗೂ ಏನೂ ಹಣ ಕೊಡ್ಬೇಕಾಗಿಲ್ಲ’ ಎಂದ ಸಂಜಯ್.

ಆನಂದಣ್ಣ ತಲೆ ತುರಿಸಿದರು. ಈ ತರಹ ಲಾಟರಿ ಯಾವಾಗಲೂ ಸಿಗುವುದು ಕಷ್ಟ ಅನಿಸಿತು.

‘ಕಾರಂತರೇ, ನೋಡಿ, ಈ ಗುಡ್ಡ ಇಳಿದು ಆ ತೋಡನ್ನು ದಾಟಿದರೆ ನನ್ನ ಜಾಗ ಬರ್ತದೆ. ಅಲ್ಲ, ತಪ್ಪಿದೆ... ಅದು ನಿಮ್ಮದೇ ಜಾಗ, ಈಗ ಅದರಲ್ಲಿ ನಾನು ಕೃಷಿ ಮಾಡಿಕೊಂಡಿದ್ದೇನಷ್ಟೆ. ಶೆಟ್ಟರಿಗೆ ಕಷ್ಟ ಆದರೆ ಈ ಕಾಟೇಜ್ ಅನ್ನು ನಿಮ್ಮ ಜಾಗದಲ್ಲೂ ಮಾಡಬಹುದು. ನಿಮಗೂ ಬಂದಾಗ ಉಳ್ಕೊಳ್ಳಲಿಕ್ಕೆ ಅನುಕೂಲ’ ಎಂದರು.

ಶೆಟ್ರಿಗೆ ಸಿಟ್ಟು ಬಂತು. ಆನಂದಣ್ಣ ತನ್ನ ಜನ ಅಂದುಕೊಂಡರೆ ಲಾಭ ಬರುವ ಸಂದರ್ಭ ಬರುವಾಗ ಈ ಮನುಷ್ಯ ನನಗೇ ಕೈಕೊಡುತ್ತಾನಲ್ಲ ಅಂದುಕೊಂಡರು.

‘ಕಾರಂತರೇ, ನನಗೇನೂ ತೊಂದರೆಯಿಲ್ಲ. ಎರಡು ತಿಂಗಳಲ್ಲಿ ಕುಟೀರ ಆದರೆ ಸಾಕಲ್ಲ? ಆಯಿತು ಅಂತ ಭಾವಿಸಿ. ಇದು ನನ್ನ ಮಾತು... ಜಯಶೆಟ್ಟಿಯ ಮಾತು. ಇನ್ನು ನಿಮಗೆ ಬಂದಾಗ ಉಳ್ಕೊಳ್ಳಲಿಕ್ಕಲ್ವ? ಈ ಕುಟೀರ ಯಾಕೆ... ನನ್ನ ಮನೆಯಲ್ಲಿ ಬೇಕಾದರೂ ಉಳ್ಕೊಳ್ಳಬಹುದು... ನೀವೇ ಹೇಳಿದ ಮಾತು, ನೀವು ನನ್ನ ಮನೆಯ

